NEW HORIZON COLLEGE LIBRARY KASTURINAGAR BANGALORE-43

**SN – 076**

# First Semester B.C.A. Examination, Nov./Dec. 2013
## (Freshers & Repeaters Scheme) (2011-12 and Onwards)
## ಕನ್ನಡ ಭಾಷಾ ಪತ್ರಿಕೆ - ೧
## ಸಾಹಿತ್ಯ ಸಲ್ಲಾಪ - ೧

Time : 3 Hours Max.Marks : 100

I. ಅ) ಈ ಪದ್ಯದ ಭಾವಾರ್ಥವನ್ನು ಬರೆಯಿರಿ : (1×6=6)

ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ
ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ.

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : (2×3=6)

ಬಿ.ವಿ. ಕಾರಂತ, ಅಂತರಜಾತಿ ವಿವಾಹ, ನಿರಂಜನ, ಕೂಡಲ ಸಂಗಮದೇವ.

II. ಅ) ಇವುಗಳಲ್ಲಿ ಐದು ಪದಗಳಿಗೆ ಮೂಲ ರೂಪವನ್ನು ಬರೆಯಿರಿ : (5×1=5)

ಹುಲಿ, ಇಸ್ಕೂಲು, ರನ್ನ, ಅಂಬುಟ್ಟೇಳಿ, ಪಯಣ, ಹಾಲು, ರಸೀದಿ.

ಆ) ಇವುಗಳಲ್ಲಿ ಐದು ಪದಗಳಿಗೆ ಅರ್ಥ ಬರೆಯಿರಿ : (5×1=5)

ಮಾವುತ, ಹದುಳ, ಧವಳ, ಕ್ಷಿತಿಜ, ಎಳಗೂಸು, ಒಕ್ಕಲು, ಗಿರಾಕಿ.

ಇ) ಇವುಗಳಲ್ಲಿ ಐದು ಪದಗಳನ್ನು ಬಿಡಿಸಿ ಬರೆಯಿರಿ. (5×1=5)

ಅಷ್ಟಾವಂಕ, ಅರಮನೆ, ಹೆಮ್ಮರ, ಕಟ್ಟಾಳು, ಕಾಳ್ಗಿಚ್ಚು, ಫಲಾಸ್ವಾದ, ಕರಿದೊವಲ.

ಈ) ಈ ಕೆಳಗಿನ ಉಪಮೆ – ರೂಪಕಗಳನ್ನು ಬಳಸಿ ಐದಕ್ಕೆ ಸ್ವಂತ ವಾಕ್ಯ ರಚಿಸಿ. (5×1=5)

ಸಂಸಾರ ಹೆಣ, ಕತ್ತುರಿಯಂತೆ, ಮಾವಿಳಿದಪ್ಪಂತೆ, ಕಮಲಮುಖಿ, ಸಕ್ಕರೆ ಸರೋವರ, ಮಲ್ಲಿಗೆ ಮುಡಿ, ಮರ್ಯಾದೆ ಮಹಲು.

III. ಇವುಗಳಲ್ಲಿ ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : (4×5=20)

1) ಅಮೃತಮತಿ ಬದಗನನ್ನು ಇಷ್ಟಪಟ್ಟಿದ್ದೇಕೆ ?
2) ದೇವರ ದಾಸಿಮಯ್ಯ ಹಸಿವಿನ ಪರಿಣಾಮವನ್ನು ಚಿತ್ರಿಸಿದ ಬಗೆ ಹೇಗೆ ?
3) 'ಮೊಂಡುಗೈಯ್ಯನ' ವ್ಯಕ್ತಿತ್ವ ಮತ್ತು ಸ್ವಭಾವವನ್ನು ಪರಿಚಯಿಸಿ.
4) ಸುಧಾಳ ಪಾತ್ರ ಪರಿಚಯ ಮಾಡಿಕೊಡಿ.
5) 'ಪಾಲಿಗೆ ಬಂದದ್ದು ಪಂಚಾಮೃತ' ಎನ್ನುವ ಮಾತು ಲಲಿತಳ ಜೀವನದಲ್ಲಿ ನಿಜವಾಯಿತೆ ?
6) ಅನಕ್ಷರಸ್ತರು ಅನುಭವಿಸುವ ಸಂಕಟಗಳೇನು ?

IV. ಇವುಗಳಿಗೆ ವಿವರವಾದ ಉತ್ತರ ಬರೆಯಿರಿ : (4×12=48)

1) ಅಮೃತಮತಿ ಮತ್ತು ಬದಗನ ಸಂಬಂಧದ ಸ್ವರೂಪವನ್ನು ಕುರಿತು ಬರೆಯಿರಿ.

ಅಥವಾ

ಸಮಾಜದಲ್ಲಿನ ಭೇಧ-ಭಾವಗಳ ಬಗ್ಗೆ ಅಲ್ಲಮಪ್ರಭು ಮತ್ತು ಬಸವಣ್ಣನವರ ಅಭಿಪ್ರಾಯವೇನು ? ವಿವರಿಸಿ.

2) ''ಜ್ಯೋತಿಷ್ಯವೆನ್ನುವುದು ಕೇವಲ ಮೂಢನಂಬಿಕೆಯೇ ಹೊರತು ಜೀವನ ಮಾರ್ಗವಲ್ಲ'' – ಡಾ. ಎಚ್. ನರಸಿಂಹಯ್ಯನವರ ಈ ಮಾತನ್ನು ವಿವೇಚಿಸಿ.

ಅಥವಾ

ಪ್ರಗತಿಪರ ಚಳುವಳಿಗಳು ಛಿದ್ರಗೊಳ್ಳಲು ಕಾರಣಗಳೇನು ? 'ಒಂದು ಒಡಕಿನ ಎದುರು' ಪ್ರಬಂಧದ ಹಿನ್ನೆಲೆಯಲ್ಲಿ ಚರ್ಚಿಸಿ.

3) ಹೊಟ್ಟೆಹೊರೆದುಕೊಳ್ಳಲು ದೇಹವನ್ನು ಮಾರಿಕೊಂಡು ಬದುಕುವುದು ಅನಿವಾರ್ಯವೆ ? 'ಕೊನೆಯ ಗಿರಾಕಿ' ಕಥೆಯನ್ನು ಆಧರಿಸಿ ವಿಚಾರಮಾಡಿ.

ಅಥವಾ

''ಮರಳಿ ಬದುಕಿಗೆ ಪಯಣ'' ಈ ಕತೆಯಲ್ಲಿ ಜೀವಪರವಾದ ನಿಲವು ಹೇಗೆ ವ್ಯಕ್ತವಾಗಿದೆ ? ವಿವರಿಸಿ.

4) ''ಪ್ರಕೃತಿ ಶಿಕ್ಷಣವೇ ಶಿಕ್ಷಣ, ಕೇವಲ ಗೋಡೆಗಳ ನಡುವೆ ಕಲಿಯುವುದು ಶಿಕ್ಷಣವಲ್ಲ'' ಈ ಮಾತನ್ನು 'ಪಂಜರಶಾಲೆ' ನಾಟಕದ ಹಿನ್ನೆಲೆಯಲ್ಲಿ ಚರ್ಚಿಸಿ.

ಅಥವಾ

ಗಿಳಿಮರಿ, ಸಂಶೋಧಕರು, ಅಳಿಯ, ಪಂಡಿತ ಇವರಲ್ಲಿ ಇಬ್ಬರ ಪಾತ್ರಗಳನ್ನು ಪರಿಚಯಿಸಿ.

---